ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-2332703,
Email :musicuniversitymys@gmail.com
Website: https://www.musicuniversity.ac.in

J.L.B. Road, Near Ashoka Circle
Lakshmipuram, Mysuru – 570 004.
Ph.Office: 0821-2332703
Registrar-Mobile No.:9880761877
Email : registrar@musicuniversity.ac.in

ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರುಕವಿ/816/2023-24 ದಿನಾಂಕ:04.05.2023

**ಗೆ,**

ಪ್ರಶಿಕ್ಷಣ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು.

**ಮಾನ್ಯರೆ,**

**ವಿಷಯ:-** ದಿನಾಂಕ:27.04.2023 ರಂದು ಜರುಗಿದ 22ನೆ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಗಳನ್ನು ಕಳುಹಿಸಿಕೊಡುವ ಕುರಿತು.

**ಉಲ್ಲೇಖ:-** ಕುಲಪತಿಯವರ ಅನುಮೋದನೆ ದಿನಾಂಕ:04.05.2023

***

ದಿನಾಂಕ:27.04.2023 ರಂದು ಬೆಳಿಗ್ಗೆ 11:30 ಗಂಟೆಗೆ ವಿಶ್ವವಿದ್ಯಾಲಯದ ಎನ್.ಕೆ.ಎನ್ ಸಭಾಂಗಣದಲ್ಲಿ ಜರುಗಿದ 22ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಯನ್ನು ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗುತ್ತಿದೆ. ಈ ನಡಾವಳಿಗಳು ತಲುಪಿದ ಒಂದು ವಾರದೊಳಗೆ ತಮ್ಮಿಂದ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ,

04/5/23
ಕುಲಸಚಿವರು

ಕುಲಸಚಿವ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-570 004

**ಪ್ರತಿ:**

1. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜ್ಯಭವನ, ಬೆಂಗಳೂರು.
2. ಹಣಕಾಸು ಅಧಿಕಾರಿಗಳು, ಕೆ.ಎಸ್.ಜಿ.ಎಚ್ ಸಂಪ್ರುಕವಿವಿ, ಮೈಸೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಆರ್ಥಿಕ ಇಲಾಖೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ.
4. ಸಹಾಯಕ ಕುಲಸಚಿವರು, ಕೆ.ಎಸ್.ಜಿ.ಎಚ್ ಸಂಪ್ರುಕವಿವಿ – ಸೂಕ್ತ ಕ್ರಮಕ್ಕಾಗಿ

# ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-2332703,
Email :musicuniversitymys@gmail.com
Website: https://www.musicuniversity.ac.in

J.L.B. Road, Near Ashoka Circle,
Lakshmipuram, Mysuru – 570 004.
Ph.Office: 0821-2332703,
Registrar-Mobile No.:9880761877
Email : registrar@musicuniversity.ac.in


**ದಿನಾಂಕ:03.05.2023**

ದಿನಾಂಕ:27.04.2023ರಂದು ಜರುಗಿದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 22ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| ಕ್ರ. ಸಂ. | ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 1. | ಪ್ರೊ. ನಾಗೇಶ್ ವಿ ಬೆಟ್ಟಕೋಟೆ, ಕುಲಪತಿಗಳು<br>ಕ.ರಾ.ಡಾ.ಗಂ.ಹಾ.ಸಂ.ಪ್ರ.ವಿ.ವಿ, ಮೈಸೂರು – 570 004. | ಅಧ್ಯಕ್ಷರು |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು<br>ಉನ್ನತ ಶಿಕ್ಷಣ ಇಲಾಖೆ<br>ಕರ್ನಾಟಕ ಸರ್ಕಾರ , ಬಹುಮಹಡಿಗಳ ಕಟ್ಟಡ<br>ಬೆಂಗಳೂರು – 560 001.<br>**ಶ್ರೀಮತಿ ಶೀತಲ್ ಎಂ. ಹೀರೆಮಠ್**<br>**ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆಯ ಪರವಾಗಿ** | ಸದಸ್ಯರು |
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು<br>ಆರ್ಥಿಕ ಇಲಾಖೆ<br>ಕರ್ನಾಟಕ ಸರ್ಕಾರ, ವಿಧಾನಸೌಧ ಬೆಂಗಳೂರು – 560 001.<br>**ಶ್ರೀಮತಿ ಕೆ. ಉಮಾ,**<br>**ಉಪ-ಕಾರ್ಯದರ್ಶಿ, ಆರ್ಥಿಕ ಇಲಾಖೆ ಪರವಾಗಿ** | ಸದಸ್ಯರು |
| 4. | ಶ್ರೀ ವಿಶ್ವನಾಥ್ ಹಿರೇಮಠ<br>ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ<br>ಕನ್ನಡ ಭವನ, ಬೆಂಗಳೂರು – 560 002. | ಸದಸ್ಯರು |
| 5. | ಶ್ರೀ ಎ. ಎಸ್. ಪ್ರಸನ್ನ ಕುಮಾರ್<br># 2688, 3ನೇ ಕ್ರಾಸ್, ಕನಕದಾಸ ನಗರ, ದಟ್ಟಗಳ್ಳಿ,<br>ಮೈಸೂರು – 570 023. | ಸದಸ್ಯರು |
| 6. | ಶ್ರೀ ಗಣೇಶ ಜೆ. ಕೊಲಂಬಿ<br>ಶ್ರೀ ಸಂಗಮೇಶ್ವರ ನಾಟ್ಯ ಸಂಘ , ಶಿವಮೊಗ್ಗ. | ಸದಸ್ಯರು |

| | | |
|---|---|---|
| 7. | ಶ್ರೀ ಎನ್. ಶ್ರೀನಾಥ್,<br>ಶ್ರೀ ಭಗವತಿ ನಿಲಯ, ನಂ. 1475/ಕೆ4<br>3ನೇ ಕ್ರಾಸ್, ತ್ಯಾಗರಾಜ ರಸ್ತೆ, ಕತ್ವಾಡಿಪುರ ಅಗ್ರಹಾರ,<br>ಕೆ. ಆರ್. ಮೊಹಲ್ಲಾ, ಮೈಸೂರು – 570 024. | ಸದಸ್ಯರು |
| 8. | ಶ್ರೀ ಮಂಜಪ್ಪ<br>ನಂ. 52, ಅಯೋಧ್ಯಾ ನಗರ, ಶ್ರೀರಾಂಪುರ 2ನೇ ಹಂತ,<br>ನಾಯ್ಡು ಸ್ಟೋರ್ ಹತ್ತಿರ, ಮೈಸೂರು – 570 034. | ಸದಸ್ಯರು |
| 9. | ಶ್ರೀಮತಿ ಅನುರಾಧ ವಿಕ್ರಾಂತ್<br>ನಂ.174, ಜಿ ಬ್ಲಾಕ್, 9ನೇ ಕ್ರಾಸ್ ಸಹಕಾರನಗರ<br>ಬೆಂಗಳೂರು – 560 092. | ಸದಸ್ಯರು |
| 10. | ಶ್ರೀ ವೇಣುಗೋಪಾಲ್<br>ಬಿನ್ ಬಿ. ಸಿ. ಬಸಪ್ಪ, ತುಂಬಸೋಗೆ ಗ್ರಾಮ ಮತ್ತು<br>ಹೆಚ್. ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ. | ಸದಸ್ಯರು |
| 11. | ಕುಲಸಚಿವರು<br>ಕ.ರಾ.ಡಾ.ಗಂ.ಹಾ.ಸಂ.ಪ್ರ.ವಿ.ವಿ., ಮೈಸೂರು – 570 004. | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

ಕುಲಸಚಿವರು ಸಭೆಗೆ ಆನ್‌ಲೈನ್ ಮುಖಾಂತರ ಹಾಜರಾಗಿದ್ದ ಸರ್ಕಾರದ ವಿವಿಧ ಇಲಾಖೆಗಳ ಪ್ರತಿನಿಧಿಗಳು ಮತ್ತು ಭೌತಿಕವಾಗಿ ಹಾಜರಿದ್ದ ಎಲ್ಲಾ ಸದಸ್ಯರಿಗೂ ಸ್ವಾಗತ ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಯವರಲ್ಲಿ ಮನವಿ ಮಾಡಿದರು.

ಕುಲಪತಿಯವರು ಸದಸ್ಯರೆಲ್ಲರನ್ನು ಮತ್ತೊಮ್ಮೆ ಸ್ವಾಗತ ಕೋರಿ ಸಭೆ ಪ್ರಾರಂಭಿಸಿ ವಿಶ್ವವಿದ್ಯಾಲಯದ ಅಧಿನಿಯಮದ ಅನುಸಾರ ವರ್ಷಕ್ಕೆ ಕನಿಷ್ಠ 4 ಬಾರಿ ಪ್ರಶಿಕ್ಷಣ ಪರಿಷತ್ತಿನ ಸಭೆ ನಡೆಸಬೇಕು. ನಿಯಮಾನುಸಾರ ಕಾಲ-ಕಾಲಕ್ಕೆ ಸಭೆ ಸಡೆಸಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಕಡತಗಳನ್ನು ಮಂಡಿಸುತ್ತಿಲ್ಲ ಎಂದರು. ಕುಲಸಚಿವರು ಉತ್ತರಿಸಿ ಈ ಹಿಂದೆ ಸಭೆಯನ್ನು ಆಯೋಜಿಸುವಂತೆ ಕುಲಪತಿಗಳಿಂದ ನಿರ್ದೇಶನ ಬರುತ್ತಿತ್ತು. ಆ ರೀತಿ ನಿರ್ದೇಶನ ಬರಲಿಲ್ಲವಾದ್ದರಿಂದ ವಿಳಂಬವಾಗಿರುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿದರು. ಕುಲಪತಿಯವರು ಮಾತನಾಡಿ ವಿಶೇಷ ಸಭೆಗಳನ್ನು ನಡೆಸಬೇಕಾದ ಸಂದರ್ಭದಲ್ಲಿ ಅಂತಹ ನಿರ್ದೇಶನ ನೀಡಲಾಗುತ್ತದೆಯೆ ಹೊರತಾಗಿ ಸಾಮಾನ್ಯ ಸಭೆಗಳನ್ನು ನಡೆಸಲು ಟಿಪ್ಪಣಿ ನೀಡುವುದಿಲ್ಲ ಎಂದು ತಿಳಿಸಿದರು.

ನಂತರ ಕುಲಪತಿಯವರು ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

**ವಿಷಯ ಸಂಖ್ಯೆ-1** ವಿಶ್ವವಿದ್ಯಾಲಯದೊಡನೆ ಒಡಂಬಡಿಕೆ ಮಾಡಿಕೊಳ್ಳುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ನೊಂದಾಯಿತ ಶುಲ್ಕಗಳನ್ನು ನಿಗದಿಪಡಿಸುವ ಹಾಗೂ ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಇರುವ ಕೋರ್ಸುಗಳ ಪ್ರವೇಶ ಮತ್ತು ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಬಗ್ಗೆ.

ಒಡಂಬಡಿಕೆ ಪರಿನಿಯಮ ಕಂಡಿಕೆ 4.10ರಲ್ಲಿ ನಮೂದಿಸಿರುವಂತೆ ನೊಂದಾಯಿತ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯದ ಜೊತೆ ಒಡಂಬಡಿಕೆ ಮಾಡಿಕೊಂಡು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳನ್ನು ನಡೆಸಲು ರಚಿಸಿರುವ ಪರಿನಿಯಮಾವಳಿಗಳಿಗೆ ಮಾನ್ಯ ಕುಲಾಧಿಪತಿಗಳಿಂದ ದಿನಾಂಕ:27.03.2023ರಂದು ಅಂಕಿತ ದೊರಕಿರುವ ಅಂಶವನ್ನು ಸರ್ಕಾರವು ತನ್ನ ದಿನಾಂಕ 29.03.2023ರ ಪತ್ರದಲ್ಲಿ ತಿಳಿಸಿರುತ್ತದೆ.ಅದರ ಬಗ್ಗೆ ವಿಶ್ವವಿದ್ಯಾಲಯದಿಂದ ದಿನಾಂಕ:06.04.2023ರಂದು ಅಧಿಸೂಚನೆ ಹೊರಡಿಸಿ ವಿಶ್ವವಿದ್ಯಾಲಯದ Website ನಲ್ಲಿ Upload ಮಾಡಲಾಗಿರುತ್ತದೆ. ಸದರಿ ಕೋರ್ಸ್‌ಗಳನ್ನು ನಡೆಸಲು ಇಚ್ಛಿಸುವ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಎಷ್ಟು ಶುಲ್ಕ ನಿಗದಿಪಡಿಸಬೇಕೆಂದು ಚರ್ಚಿಸಿ ವರದಿ ನೀಡಲು ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು ಎಂದು ವಿವರಿಸಿದರು.

ಸದರಿ ಶುಲ್ಕ ಪರಿಷ್ಕರಣ ಸಮಿತಿಯು ದಿನಾಂಕ:13.04.2023 ರಂದು ಸಭೆ ಸೇರಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ನಡೆಸುವ ವಿವಿಧ ಕೋರ್ಸುಗಳಿಗೆ ಶುಲ್ಕ ನಿಗದಿಪಡಿಸಿ ವರದಿಯೊಂದನ್ನು ನೀಡಿರುತ್ತದೆ. ಮುಂದುವರೆದು ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಇರುವ ಕೋರ್ಸುಗಳಿಗೆ 2022-23ನೇ ಶೈಕ್ಷಣಿಕ ಸಾಲಿನಲ್ಲಿ ನಿಗಧಿಪಡಿಸಿರುವ ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಶೇಕಡಾ 10 ರಷ್ಟನ್ನು ಹೆಚ್ಚಿಸಿ 2023-24ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ತರಲು ಶಿಫಾರಸ್ಸು ಮಾಡಿರುತ್ತದೆ ಎಂದು ತಿಳಿಸಿದರು.

ಈ ಪ್ರಸ್ತಾವನೆಯನ್ನು ಸಭೆಯಲ್ಲಿ ಅನುಮೋದಿಸಿದ ನಂತರ ಪತ್ರಿಕೆಗಳಲ್ಲಿ ಜಾಹಿರಾತು ನೀಡಿ MOU ಪರಿನಿಯಮಗಳಲ್ಲಿ ತಿಳಿಸಿರುವಂತೆ ನೊಂದಾಯಿತ ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು. ನಂತರ ಎಲ್ಲಾ ಅರ್ಜಿಗಳನ್ನು ಪ್ರಶಾಸನ ಸಭೆಯ ಮುಂದೆ ಮಂಡಿಸಿ ಸಂಸ್ಥೆಗಳ ಪರಿಶೀಲನೆಗಾಗಿ ಸಮಿತಿ ರಚನೆಗೆ ಅನುಮೋದನೆ ಪಡೆದುಕೊಂಡು ಪರಿನಿಯಮಾವಳಿಗಳಲ್ಲಿನ ನಿಯಮಗಳಂತೆ ಪ್ರಕ್ರಿಯೆಗಳನ್ನು ನಡೆಸಿ ಅರ್ಹವಿರುವ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಕ್ರಮ ತೆಗೆದು ಕೊಳ್ಳಲಾಗುವುದೆಂದು ತಿಳಿಸಿದರು.

ಶ್ರೀಮತಿ ಕೆ. ಉಮಾ, ಸರ್ಕಾರದ ಉಪಕಾರ್ಯದರ್ಶಿ ಇವರು ಮಾತನಾಡಿ ಎಷ್ಟು ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಳ್ಳಲು ಕ್ರಮ ವಹಿಸಿದ್ದೀರಿ ಮತ್ತು MOU ಪರಿನಿಯಮಗಳಲ್ಲಿ ನಮೂದಿಸಿರುವ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಮಾತ್ರ ಮಾನ್ಯತೆ ನೀಡಲು ಒಡಂಬಡಿಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಕುಲಪತಿಯವರು ಉತ್ತರಿಸಿ ಅಸ್ತಿತ್ವದಲ್ಲಿರುವ UG, PG ಮತ್ತು ಪ್ರಾರಂಭಿಸಬಹುದಾದ ಇತರೆ ಕೋರ್ಸುಗಳನ್ನು ಪರಿನಿಯಮಗಳ ರೀತಿಯಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಗುವುದೆಂದು ತಿಳಿಸಿದರು.

ವಿಶ್ವವಿದ್ಯಾಲಯದ ಕಾಯ್ದೆ ಸೆಕ್ಷನ್ 4ರ ಅನುಸಾರ ಅದರ ಧ್ಯೇಯೋದ್ದೇಶಗಳ ಪರಿಮಿತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಶ್ರೀಮತಿ ಕೆ. ಉಮಾ ಅವರು ತಿಳಿಸಿದರು. ಸಾಹಸ ಕಲೆಗಳು ಪ್ರದರ್ಶಕ ಕಲೆಗಳ ವ್ಯಾಪ್ತಿಯಲ್ಲಿ ಬರುತ್ತದೆಯೆ ಎಂಬ ಪ್ರಶ್ನೆಗೆ ಕುಲಪತಿಯವರು ಉತ್ತರಿಸಿ, ಸಂಗೀತ, ಜಾನಪದ ಮತ್ತು ಪ್ರದರ್ಶಕ ಕಲೆಗಳನ್ನು 'ಕನ್ನಡ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ನಮ್ಮ ಸಂಗೀತ ವಿಶ್ವವಿದ್ಯಾಲಯಗಳಲ್ಲಿ ನಡೆಸಲಾಗುತ್ತದೆ. ಕೋರ್ಸುಗಳನ್ನು ಕೆಲವು ವಿಭಿನ್ನ ಬದಲಾವಣೆಗಳೊಂದಿಗೆ ನಡೆಸಬಹುದಾಗಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕೆ ಇದೊಂದು ಒಳ್ಳೆಯ ಅವಕಾಶ ಎಂದು ತಿಳಿಸಿದರು. ನೊಂದಾಯಿತ ಶುಲ್ಕದ ಜೊತೆಗೆ ಸಂಸ್ಥೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಶುಲ್ಕದ ಶೇಕಡಾ 25ರಷ್ಟನ್ನು ವಿಶ್ವವಿದ್ಯಾಲಯಕ್ಕೆ ಜಮ ಮಾಡಿಸಿಕೊಳ್ಳಲು ಪರಿನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಈ ಹಿಂದೆ ಅರ್ಜಿಗಳನ್ನು ಸಲ್ಲಿಸಿ ಪ್ರಶಾಸನ/ಪ್ರಶಿಕ್ಷಣ ಪರಿಷತ್ತಿನ ಸದಸ್ಯರನ್ನೊಳಗೊಂಡ ಸಮಿತಿಗಳು ಶಿಫಾರಸ್ಸು ಮಾಡಿರುವ ಪರಿನಿಯಮಗಳ ನ್ವಯ ನಡೆಸುವ ನೊಂದಾಯಿತಶಿಕ್ಷಣ ಸಂಸ್ಥೆಗಳಿಗೆ ಅರ್ಜಿ ಶುಲ್ಕವನ್ನು ಹೊರತು ಪಡಿಸಿ ನೊಂದಾಯಿತ ಶುಲ್ಕವನ್ನು ಪಾವತಿ ಮಾಡಿಸಿಕೊಂಡು ಒಡಂಬಡಿಕೆ ಮಾಡಿಕೊಳ್ಳುವುದಾಗಿ ಕುಲಪತಿಯವರು ತಿಳಿಸಿದರು. ವಿಶ್ವವಿದ್ಯಾಲಯದ ಅಭಿವೃದ್ದಿಯ ದೃಷ್ಟಿಯಿಂದ ಒಳ್ಳೆಯ ಕಾರ್ಯಕ್ರಮಗಳನ್ನು ನಿರ್ವಹಿಸುವುದಕ್ಕೆ ತಮ್ಮ ಸಹಮತ ಇದೆಯೆಂದು ಸದಸ್ಯರಾದ ಶ್ರೀ ಮಂಜಪ್ಪ ಅವರು ತಿಳಿಸಿದರು.

**ನಿರ್ಣಯ :-** **ಚರ್ಚೆಯ ನಂತರ, ಈಗಾಗಲೆ ಅರ್ಜಿಗಳನ್ನು ಸಲ್ಲಿಸಿದ್ದು ಪ್ರಶಾಸನ/ಪ್ರಶಿಕ್ಷಣ ಪರಿಷತ್ತಿನ ಸದಸ್ಯರನ್ನೊಳಗೊಂಡ ಸಮಿತಿಯು ಶಿಫಾರಸ್ಸು ಮಾಡಿರುವ ಸಂಸ್ಥೆಗಳಿಂದ ಪರಿನಿಯಮದಲ್ಲಿರುವ ಅನುಬಂಧದ ಅನುಸಾರ ನೂತನ ಅರ್ಜಿ ನಮೂನೆಯಲ್ಲಿ ಪ್ರಸ್ತಾವನೆಯನ್ನು ಪಡೆದುಕೊಂಡು ಸಂಸ್ಥೆಯ ಎಲ್ಲಾ ದಾಖಲಾತಿಗಳನ್ನು ಸಮಗ್ರವಾಗಿ ಪರಿಶೀಲಿಸಿ ಎಲ್ಲಾ ಷರತ್ತುಗಳನ್ನು ಪೂರೈಸುವಂತಹ ಸಂಸ್ಥೆಗಳ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಶಿಕ್ಷಣ ಪರಿಷತ್ತು ನಿರ್ಣಯಿಸಿತು. ಮುಂದುವರಿದು ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ಪ್ರಸ್ತಾವನೆಗಳನ್ನು ಪರಿನಿಯಮಗಳಲ್ಲಿನ ಅಂಶಗಳನ್ನು ಪಾಲಿಸಿಕೊಂಡು ಒಡಂಬಡಿಕೆ ಮಾಡಿಕೊಳ್ಳಲು ಪ್ರಶಿಕ್ಷಣ ಪರಿಷತ್ತು ನಿರ್ಣಯಿಸಿತು.**

**ವಿಷಯ ಸಂಖ್ಯೆ- 2** ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ (ಹಳೆಯ ಪಠ್ಯಕ್ರಮದಂತೆ) ಬಿ.ಎ ವಿದ್ಯಾರ್ಥಿಗಳ ಬಾಕಿ ಉಳಿದ ಪರೀಕ್ಷಾ ಪತ್ರಿಕೆಗಳಿಗೆ ಪರೀಕ್ಷೆ ನಡೆಸಲು ಕೊನೆಯ ಅವಕಾಶಕ್ಕಾಗಿ ಮನವಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಂಬಂಧ ಪ್ರಶಾಸನ ಸಭೆಯ ಅನುಮೋದನೆ ಪಡೆಯುವ ಬಗ್ಗೆ.

**ನಿರ್ಣಯ:-** **ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಹೊಸ ವಿನಿಮಯಗಳು (Regulations) ಜಾರಿಗೆ ಬಂದಿರುವುದರಿಂದ ಹಳೆಯ ವಿದ್ಯಾರ್ಥಿಗಳು ಹೊಸ ನಿಯಮಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಅವಕಾಶವಿಲ್ಲದಿರುವುದರಿಂದ ಹಳೆಯ CBCS ಪದ್ಧತಿಯಡಿ ಪ್ರವೇಶ ಪಡೆದು ಪದವಿ ಪೂರೈಸದ ವಿದ್ಯಾರ್ಥಿಗಳಿಗೆ ಒಂದು ಬಾರಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸಲು ಪ್ರಶಾಸನ ಸಭೆಯು ತೆಗೆದುಕೊಂಡಿರುವ ನಿರ್ಣಯವನ್ನು ಪ್ರಶಿಕ್ಷಣ ಪರಿಷತ್ತು ಅನುಸಮರ್ಥಿಸಿತು.**

**ವಿಷಯ ಸಂಖ್ಯೆ- 3** ಎಂ.ಪಿ.ಎ ಕೋರ್ಸಿನ ನಾಲ್ಕನೇ ಚಾತುರ್ಮಾಸದ (Semester) ಪ್ರೌಢ ಪ್ರಬಂಧ ಪತ್ರಿಕೆಯನ್ನು ಮೂರನೇ ಚಾತುರ್ಮಾಸದಲ್ಲಿ ಮತ್ತು ಮೂರನೇ ಚಾತುರ್ಮಾಸದ ಕಛೇರಿ ಪ್ರಸ್ತುತಿ ಪತ್ರಿಕೆಯನ್ನು ನಾಲ್ಕನೇ ಚಾತುರ್ಮಾಸದಲ್ಲಿ ಅಧ್ಯಯನ ಮಾಡುವ ಬಗ್ಗೆ

ಶ್ರೀ ಮಂಜಪ್ಪ ಅವರು ಮಾತನಾಡಿ ಈ ಹಿಂದೆ ಇದ್ದ ವ್ಯವಸ್ಥೆ ಸರಿ ಇದೆ. ಅದನ್ನು ಬದಲಾಯಿಸುವುದು ಬೇಡ. ವಿದ್ಯಾರ್ಥಿ ನಾಲ್ಕನೆ ಸೆಮಿಸ್ಟರ್‌ನಲ್ಲಿ ಕಷ್ಟಪಟ್ಟು ತಮ್ಮ ಕೌಶಲ್ಯವನ್ನು ತೋರಿ ಅಧ್ಯಯನ ಮಾಡಬೇಕು ಎಂದು ತಿಳಿಸಿದರು. ಶ್ರೀ ವೇಣುಗೋಪಾಲರವರು ಮಾತನಾಡಿ ಈ ರೀತಿ ಬದಲಾವಣೆ ಬಯಸಿ ಯಾರಾದರೂ ವಿದ್ಯಾರ್ಥಿಗಳಿಂದ ಮನವಿ ಬಂದಿದೆಯೆ ಎಂದು ಕೇಳಿದರು. ಸದಸ್ಯರುಗಳಾದ ಶ್ರೀಮತಿ ಅನುರಾಧಾ ವಿಕ್ರಾಂತ್, ಶ್ರೀನಾಥ್ ಮತ್ತು ಪ್ರಸನ್ನ ಕುಮಾರ್ ರವರುಗಳು ಮಾತನಾಡಿ ವಿದ್ಯಾರ್ಥಿಗಳಿಗೆ ಈ ಕ್ರಮವನ್ನು ಅಳವಡಿಸಿಕೊಳ್ಳಬಹುದು ಎಂದು ತಿಳಿಸಿದರು. ಕುಲಪತಿಯವರು ಉತ್ತರಿಸಿ ಈಗಾಗಲೆ ಈ ಬದಲಾವಣೆಯನ್ನು 2022-23ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿರುತ್ತದೆ. ವಿದ್ಯಾರ್ಥಿಗಳ ಅನುಕೂಲವಾಗಲೆಂದು ಈ ರೀತಿ ಬದಲಾವಣೆಯನ್ನು ಅಧ್ಯಯನ ಮಂಡಳಿಗಳಲ್ಲಿ ಚರ್ಚಿಸಿ ಈ ನಿರ್ಣಯ ಕೈಗೊಳ್ಳಲಾಗಿರುತ್ತದೆ ಎಂದು ಸಭೆಗೆ ವಿವರಸಿದರು.

**ನಿರ್ಣಯ :- ಚರ್ಚೆಯ ನಂತರ ಪ್ರಸ್ತಾವನೆಯನ್ನು ಪ್ರಶಿಕ್ಷಣ ಪರಿಷತ್ತು ಅನುಮೋದಿಸಿತು.**

**ವಿಷಯ ಸಂಖ್ಯೆ:-4** ದಿನಾಂಕ:01.07.2022ರಂದು ನಡೆದ 21ನೇ ಪ್ರಶಿಕ್ಷಣ ಪರಿಷತ್ತಿನ ಸಭೆ ನಡಾವಳಿ ಮತ್ತು 26.08.2022ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ಕುಲಪತಿಯವರು ಮಾತನಾಡಿ ಹಿಂದೆ ನಡೆದಿರುವ ಪ್ರಶಿಕ್ಷಣ ಪರಿಷತ್ತಿನ ಸಭೆಗಳ ನಡಾವಳಿಗಳನ್ನು ಈ ಸಭೆಯಲ್ಲಿ ಸ್ಥಿರೀಕರಣಕ್ಕಾಗಿ ಮಂಡಿಸಬೇಕಾಗಿತ್ತು ಮತ್ತು ಸದರಿ ಸಭೆಗಳ ನಡಾವಳಿಗಳ ಮೇಲೆ ಅನುಪಾಲನ ಕ್ರಮಗಳನ್ನು ಸರಿಯಾಗಿ ತೆಗೆದುಕೊಂಡಿರುವುದಿಲ್ಲ ಎಂದು ತಿಳಿಸಿದರು. ಕುಲಸಚಿವರು ಉತ್ತರಿಸಿ ನಡಾವಳಿಗಳ ಮೇಲೆ ಈಗಾಗಲೆ ಕ್ರಮಗಳನ್ನು ಜರುಗಿಸಲಾಗಿದ್ದು, ಪ್ರಸ್ತಾವನೆಯ ಸ್ಥಿರೀಕರಣಕ್ಕಾಗಿ ಅನುಮೋದನೆಯನ್ನು ಕೋರಲಾಗುತ್ತಿದೆ ಎಂದು ತಿಳಿಸಿದರು.

**ನಿರ್ಣಯ :-** **ಚರ್ಚೆಯ ನಂತರ ದಿನಾಂಕ:01.07.2022ರಂದು ನಡೆದ 21ನೇ ಪ್ರಶಿಕ್ಷಣ ಪರಿಷತ್ತಿನ ಸಭೆ ನಡಾವಳಿ ಮತ್ತು 26.08.2022ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸ್ಥಿರೀಕರಸಲಾಯಿತು.**

**ಇತರೆ ಚರ್ಚೆಗಳು**

1. ವಿಶ್ವವಿದ್ಯಾಲಯದಲ್ಲಿ ಒಂದು ಸುಸಜ್ಜಿತವಾದ ಗ್ರಂಥಾಲಯವನ್ನು ಸ್ಥಾಪಿಸುವಂತೆ ಎಲ್ಲಾ ಸದಸ್ಯರು ಕುಲಪತಿಯವರಿಗೆ ತಿಳಿಸಿ ವಿಶ್ವವಿದ್ಯಾಲಯದ ಶ್ರೇಯೋಭಿವೃದ್ಧಿಯ ಹಿತದೃಷ್ಟಿಯಿಂದ ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಪ್ರಖ್ಯಾತ ಲೇಖಕರಿಂದ ರಚಿತವಾದ ಪುಸ್ತಕಗಳನ್ನು ಪ್ರಕಟಿಸುವಂತೆ ಸಲಹೆ ನೀಡಿದರು. ಆಂತರಿಕ ಸಂಪನ್ಮೂಲದಿಂದ ಗ್ರಂಥಾಲಯ ಸಹಾಯಕರೊಬ್ಬರನ್ನು ನೇಮಕ ಮಾಡಿಕೊಂಡು ಉತ್ತಮ ಗ್ರಂಥಾಲಯವನ್ನು ಸ್ಥಾಪಿಸುವುದಾಗಿ ಕುಲಪತಿಯವರು ತಿಳಿಸಿದರು.

2. ಶ್ರೀಮತಿ ಅನುರಾಧ ವಿಕ್ರಾಂತ್‌ರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ Harassment cell ಪ್ರಾರಂಭಿಸಿ ಕುಂದು ಕೊರತೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲು ಸಲಹೆ ನೀಡಿದರು. ಶ್ರೀ ಮಂಜಪ್ಪ ಅವರು ಮಾತನಾಡಿ Harassment cell and Grievance cell ನ್ನು ಸ್ಥಾಪಿಸಿ ಎಲ್ಲರ ದೂರುಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರ ಕಂಡುಕೊಳ್ಳಲು ಕ್ರಮವಹಿಸಿ ಎಂದು ಸಲಹೆ ನೀಡಿದರು. ಕುಲಪತಿಗಳು ಮಾತನಾಡಿ ಯುಜಿಸಿ ನಿಯಮಗಳ ಪ್ರಕಾರ ವಿವಿಧ ಕೇಂದ್ರಗಳನ್ನು ಸ್ಥಾಪಿಸಲು ಕ್ರಮವಹಿಸುವುದಾಗಿ ತಿಳಿಸಿದರು.

3. ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಇರುವ ಕೋರ್ಸುಗಳ ಪಠ್ಯಕ್ರಮಗಳನ್ನು ಪರಿಷ್ಕರಿಸಲು ಸದಸ್ಯರುಗಳು ಸಲಹೆ ನೀಡಿದರು. ಕುಲಪತಿಯವರು ಉತ್ತರಿಸಿ ಈಗಾಗಲೆ ಅಸ್ತಿತ್ವದಲ್ಲಿರುವ ಕೋರ್ಸುಗಳು ಮತ್ತು ಹೊಸದಾಗಿ ಪ್ರಾರಂಭಿಸಬೇಕಾಗಿರುವ ಕೋರ್ಸುಗಳ ಬಗ್ಗೆ ರೂಪುರೇಷೆ ಮತ್ತು ಪಠ್ಯಕ್ರಮ ರಚಿಸಲು ವಿವಿಧ ರಂಗಗಳ ತಜ್ಞರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗಿದೆ. ಸದರಿ ತಜ್ಞರ ಸಭೆಯು ಸಲ್ಲಿಸುವ ವರದಿಯನ್ನಾಧರಿಸಿ ಉತ್ತಮ ರೀತಿಯಲ್ಲಿ ಪಠ್ಯಕ್ರಮಗಳನ್ನು ರಚಿಸಲಾಗುವುದೆಂದು ತಿಳಿಸಿದರು.

4. ಶ್ರೀ ವೇಣುಗೋಪಾಲ್‌ರವರು ಮಾತನಾಡಿ ಪ್ರಸಾರಂಗದಿಂದ ಉತ್ತಮ ಕೃತಿಗಳನ್ನು ಪ್ರಕಟಿಸಿ ಅವುಗಳನ್ನು ಮಾರಾಟ ಮಾಡುವುದರಿಂದ ವಿಶ್ವವಿದ್ಯಾಲಯಕ್ಕೆ ಒಳ್ಳೆಯ ಆದಾಯ ತರಬಹುದು ಎಂದು ತಿಳಿಸಿದರು. ಕುಲಪತಿಯವರು ಉತ್ತರಿಸಿ ಈ ಬಗ್ಗೆ ಪ್ರಶಿಕ್ಷಣ ಪರಿಷತ್ತಿನ ಸಲಹೆಯಂತೆ ಪ್ರಸಾರಾಂಗ ಪ್ರಕಟಣಾ ಸಮಿತಿಯೊಂದನ್ನು ರಚಿಸಿ ಸಮಿತಿಯು ಶಿಫಾರಸ್ಸು ಮಾಡುವ ಕೃತಿಗಳನ್ನು ಪ್ರಕಟಿಸಲಾಗುವುದೆಂದು ಸಭೆಗೆ ತಿಳಿಸಿದರು. ಹಾಗೂ ಸದರಿ ಪ್ರಕಟವಾಗುವ ಪುಸ್ತಕಗಳನ್ನು ಒಡಂಬಡಿಕೆ ಮಾಡಿಕೊಳ್ಳುವ ಸಂಸ್ಥೆಗಳು ಸಹ ಖರೀದಿಸಿ ವಿದ್ಯಾರ್ಥಿಗಳಿಗೆ ಪೂರೈಸುವಂತೆ ತಿಳಿಸಬಹುದು ಎಂದು ನಿರ್ಣಯಿಸಲಾಯಿತು.

5. ನುರಿತ ಕಲಾವಿದರಿಂದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ನೀಡುವ ಕುರಿತು ಈಗಾಗಲೆ ಈ ಹಿಂದೆ ಪ್ರಸ್ತಾಪಿಸಿದ್ದು ಅದನ್ನು ಇನ್ನು ಜಾರಿಗೆ ತಂದಿರುವುದಿಲ್ಲವೆಂದು ಶ್ರೀಮತಿ ಅನುರಾಧ ವಿಕ್ರಾಂತ್‌ರವರು ನೆನಪಿಸಿದರು. ಕುಲಪತಿಯವರು ಉತ್ತರಿಸಿ ಶ್ರೀಮತಿ ವೀಣಾ ಮೂರ್ತಿಯವರು ನೃತ್ಯ ವಿಭಾಗದಲ್ಲಿ ಕರ್ನಾಟಕ / ಸಂಸ್ಕೃತಿಯ ಕುರಿತು ನೃತ್ಯ ರೂಪಕದ ಕಾರ್ಯಕ್ರಮ ನಿರ್ದೇಶಿಸಲು ಒಪ್ಪಿರುತ್ತಾರೆ. ಇನ್ನುಳಿದ ಕೋರ್ಸುಗಳಿಗೆ ಸಂಬಂಧಿಸಿದಂತೆ ನಿರ್ದೇಶಕರನ್ನು ಗುರುತಿಸುವ ಯೋಜನೆ ನಡೆದಿದೆ ಎಂದು ತಿಳಿಸಿ ನೃತ್ಯ, ನಾಟಕ ಮತ್ತು ಸಂಗೀತಕ್ಕೆ ಸಂಬಂಧಿಸಿದ 60 ನಿಮಿಷಗಳ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸಬೇಕೆಂದು ಎಲ್ಲಾ ಸದಸ್ಯರು ತಿಳಿಸಿದರು.

6. ಕುಲಪತಿಯವರು 2023-24ನೇ ಶೈಕ್ಷಣಿಕ ಸಾಲಿನ ಕ್ರಿಯಾ ಯೋಜನೆಯೊಂದನ್ನು ಸಭೆಗೆ ವಿವರಿಸಿ, ವಿಶ್ವವಿದ್ಯಾಲಯದ ವ್ಯಾಪ್ತಿಯು ಇಡೀ ರಾಜ್ಯವಾಗಿರುವುದರಿಂದ 7 ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಬೆಂಗಳೂರಿನಲ್ಲಿ ಎರಡು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲ್ಬುರ್ಗಿ ಮತ್ತು ಶಿವಮೊಗ್ಗದಲ್ಲಿ ತಲಾ ಒಂದು ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಶಿಕ್ಷಣವನ್ನು ಎಲ್ಲರಿಗೂ ತಲುಪುವಂತೆ ಕ್ರಮ ತೆಗೆದು ಕೊಳ್ಳಲಾಗುವುದೆಂದು ತಿಳಿಸಿದರು. ಬೆಂಗಳೂರಿನಲ್ಲಿರುವ **ಸಮರ್ಥನಂ** ಕೇಂದ್ರವು 600 ವಿಕಲಚೇತನ ಮಕ್ಕಳನ್ನು ಹೊಂದಿದ್ದು ತಮ್ಮ ಕಟ್ಟಡದಲ್ಲಿ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರ ತೆರೆಯಲು ಇಚ್ಛಾಶಕ್ತಿ ಹೊಂದಿದ್ದಾರೆ. ಹಾಗೂ ವಿಕಲಚೇತನ ಮಕ್ಕಳಿಗೆ ಸಂಗೀತ ಶಿಕ್ಷಣ ಕೊಡಿಸಲು ಮುಂದಾಗಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ತಾವು ನಡೆಸುತ್ತಿದ್ದ ಸಂಗೀತ ಪರೀಕ್ಷೆ, ಹಾಗೂ ಪ್ರದರ್ಶಕ ಕಲೆಗಳ ನೃತ್ಯ, ತಾಳವಾದ್ಯಗಳಲ್ಲಿ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳನ್ನು ನಡೆಸುವ ಮತ್ತು ಪ್ರಮಾಣ ಪತ್ರವನ್ನು ನೀಡುವ ಸಂಪೂರ್ಣ ಜವಾಬ್ದಾರಿಯನ್ನು ಮಂಡಳಿಯಿಂದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ವಹಿಸಿಕೊಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ಪರೀಕ್ಷೆಗಳನ್ನು ನಡೆಸಲು ಪ್ರಾದೇಶಿಕ ಕೇಂದ್ರಗಳ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಶಿಕ್ಷಣ ಸಮಿತಿಯ ಸದಸ್ಯರಾದ ಶ್ರೀ ಶ್ರೀನಾಥ್ ಅವರು ಮಾತನಾಡಿ ಶಾಲಾ ಮಂಡಳಿ ನಡೆಸುತ್ತಿರುವ ಪರೀಕ್ಷೆಗಳಲ್ಲಿ ಕೆಲವು ಕಡೆ ಅಕ್ರಮಗಳು ನಡೆದಿರುವುದನ್ನು ತಾವು ಗಮನಿಸಿರುವುದಾಗಿ ತಿಳಿಸಿ ವಿಶ್ವವಿದ್ಯಾಲಯದಿಂದ ನಡೆಸುವ ಸಂದರ್ಭದಲ್ಲಾದರು ನಿಯಮಗಳನ್ನು ಉಲ್ಲಂಘಿಸದೆ ಪರೀಕ್ಷೆಗಳನ್ನು ನಡೆಸಬೇಕೆಂದು ತಿಳಿಸಿದರು. ಕುಲಪತಿಯವರು ಉತ್ತರಿಸಿ ಪ್ರಾದೇಶಿಕ ಕೇಂದ್ರಗಳ ಮುಖಾಂತರ ಸದರಿ ಪರೀಕ್ಷೆಗಳ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಲಾಗುವುದೆಂದು ತಿಳಿಸಿದರು.

ಸದರಿ ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಆಯಾ ವಲಯದ ಶಿಕ್ಷಕರನ್ನೇ ಕೇಂದ್ರದ ಸಂಯೋಜಕರನ್ನಾಗಿ ನೇಮಕ ಮಾಡಿದರೆ ಕೇಂದ್ರಗಳಲ್ಲಿ ಕ್ರಮಬದ್ಧ ರೀತಿಯಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಶಿಕ್ಷಣವನ್ನು ಉತ್ತೇಜಿಸಬಹುದಾಗಿದೆ ಎಂದು ಕುಲಪತಿಯವರು ವಿವರಿಸಿದರು. ಈ ರೀತಿಯ ಸಂಯೋಜಕರನ್ನು ನೇಮಕ ಮಾಡಿಲ್ಲವಾದ ಕಾರಣ ಮಂಡ್ಯ ಮತ್ತು ಹುಣಸೂರಿನಲ್ಲಿ ತೆರೆದಿದ್ದ ಕೇಂದ್ರಗಳು ಮುಚ್ಚಲ್ಪಟ್ಟಿರುತ್ತದೆ ಎಂದು ತಿಳಿಸಿದರು. ವಾಸ್ತವವಾಗಿ ಮಂಡ್ಯದ ಕೇಂದ್ರಕ್ಕೆ ಸರ್ಕಾರದಿಂದ ಜಮೀನು ಹಂಚಿಕೆಯಾಗುವ ಕ್ರಮ ಪ್ರಗತಿಯಲ್ಲಿದ್ದು ಇತ್ತೀಚಿನ ಬೆಳವಣಿಗೆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಜಾನಪದ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಈ ಎರಡು ಸಂಸ್ಥೆಗಳಿಗೂ ಜಮೀನು ಹಂಚಿಕೆ ಮಾಡಲಾಗಿದೆ. ಕಡತಗಳು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿದೆ ಅದನ್ನು ಪರಿಶೀಲಿಸುವಂತೆ ಸಭೆಯಲ್ಲಿ ಕುಲಸಚಿವರಿಗೆ ನಿರ್ದೇಶಿಸಲಾಯಿತು.

**7.** ಮುಂದುವರಿದು ವಿಶ್ವವಿದ್ಯಾಲದ ಅಧಿನಿಯಮ 2009ರಲ್ಲಿ ಜಾರಿಗೆ ಬಂದಾಗಿನಿಂದಲು ಆ ಅಧಿನಿಯಮದ ಪ್ರಕರಣಗಳಲ್ಲಿನ (Sections) ಅಂಶಗಳ ಮೇಲೆ ಯಾವುದೇ ಪರಿನಿಯಮಗಳನ್ನು ರಚಿಸಿಕೊಂಡಿಲ್ಲದ ಕಾರಣ ಸಮರ್ಥ ರೀತಿಯಲ್ಲಿ ಆಡಳಿತ ನಡೆಸಲು ಸಾದ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪೂರ್ಣ ಅಧಿನಿಯಮದ ಎಲ್ಲಾ ಅಂಶಗಳ ಮೇಲೆ ಪರಿನಿಯಮಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸಿ ಮಾನ್ಯ ಕುಲಾಧಿಪತಿಯವರಿಂದ ಅಂಕಿತ ಪಡೆದುಕೊಂಡು ಜಾರಿಗೊಳಿಸಬೇಕಾಗುತ್ತದೆ. ಸದರಿ ಪರಿನಿಯಮಗಳು, ವಿನಿಯಮಗಳ ನಿಯಮಗಳು ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ನಿಯಮಗಳನ್ನು ರೂಪಿಸುವ ಸಲುವಾಗಿ ನುರಿತ ತಜ್ಞರ ಸಮಿತಿಯೊಂದನ್ನು ರಚಿಸಲು ಪ್ರಶಿಕ್ಷಣ ಪರಿಷತ್ತಿನ ಸಭೆಯು ಕುಲಪತಿಯವರಿಗೆ ಅಧಿಕರಿಸಿತು.

8. ಪಿ.ಹೆಚ್.ಡಿ ಕೋರ್ಸುಗಳನ್ನು ಪ್ರಾರಂಭಿಸುವ ಸಂಬಂಧ ಈಗಾಗಲೆ ಸುಮಾರು 7 ವರ್ಷಗಳ ಹಿಂದೆಯೇ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆದರೆ ಮಾರ್ಗದರ್ಶಕರ ಗುರುತಿಸುವಿಕೆಯ ಪ್ರಕ್ರಿಯೆ ಮುಗಿದಿಲ್ಲ. ಆದ್ದರಿಂದ ಅಧಿಸೂಚನೆಯೊಂದನ್ನು ಹೊರಡಿಸಿ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿರುವ ಕೋರ್ಸುಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶಕರಾಗಿ ನೊಂದಣಿ ಮಾಡಿಸಿಕೊಳ್ಳುವ ಇಚ್ಛೆಯುಳ್ಳ ಶಿಕ್ಷಕರಿಂದ ಅರ್ಜಿ ಆಹ್ವಾನಿಸಿ ಆ ಪ್ರಕ್ರಿಯೆ ಮುಗಿದ ನಂತರ ವಿದ್ಯಾರ್ಥಿಗಳ ನೊಂದಣಿ ಕಾರ್ಯ ಮುಂದುವರೆಸಲು ಪ್ರಶಿಕ್ಷಣ ಪರಿಷತ್ತು ನಿರ್ಣಯಿಸಿತು.

9. ಸದಸ್ಯರಾದ ಶ್ರೀ ಮಂಜಪ್ಪ ಅವರು ಮಾತನಾಡಿ ಪ್ರಶಿಕ್ಷಣ ಪರಿಷತ್ತಿನ ಸದಸ್ಯರಿಗೆ ವಿಶ್ವವಿದ್ಯಾಲಯದ ವತಿಯಿಂದ ಒಂದು ಶೈಕ್ಷಣಿಕ ಪ್ರವಾಸ ಕೈಗೊಳ್ಳುವಂತೆ ಕೋರಿದರು. ಅಂದರೆ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕೋರ್ಸುಗಳನ್ನು ನಡೆಸುವ ಭಾರತದ ಯಾವುದಾದರು ಒಂದು ವಿಶ್ವವಿದ್ಯಾಲಯಕ್ಕೆ ಭೇಟಿನೀಡಿ ಅಲ್ಲಿನ ರೂಪುರೇಷಗಳ ಬಗ್ಗೆ ಅಧ್ಯಯನ ಮಾಡಿ ಉತ್ತಮವಾದ ಅಂಶಗಳನ್ನು ನಮ್ಮ ವಿಶ್ವವಿದ್ಯಾಲಯದಲ್ಲೂ ಅಳವಡಿಸಿಕೊಳ್ಳಲು ಈ ಪ್ರವಾಸ ಸಹಕಾರಿಯಾಗುತ್ತದೆ ಎಂದು ವಿವರಿಸಿದರು. ಕುಲಪತಿಯವರು ಉತ್ತರಿಸಿ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ಈ ಪ್ರಸ್ತಾವನೆಗೆ ಪ್ರಶಾಸನ ಸಭೆಯ ಅನುಮೋದನೆ ಪಡೆದುಕೊಂಡು ಕ್ರಮ ಜರುಗಿಸುವುದಾಗಿ ಸಭೆಗೆ ಭರಸವೆ ನೀಡಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

03/5/23

ಕುಲಪತಿಗಳು 5/23